Regd No BG 165 5-11-1969

SATYAVADI Daily, MYSORE 4 ★ 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ರಾಂ ಸುಭಾಗ್ ಸಿಂಗ್‌ರಿಂದ ಮಂತ್ರಿ ಪದವಿಗೆ ರಾಜೀನಾಮೆ

ತಾ. 7-11-69 ರಂದು ಉದ್ಘಾಟನೆ ಪ್ರಾರಂಭ

... ದಿನವಹಿ 4 ಆಟಗಳು ....

ಒಲಂಪಿಯಾ ಚಿತ್ರಮಂದಿರದಲ್ಲಿ

ಪ್ರತಿದಿನ : 10-30, 3-30, 6-30 ಮತ್ತು 9-45 ಕ್ಕೆ

ಓರ್ವ ಕೊಲೆಪಾತಕಿಯ ಅತ್ಯಂತ ರೋಮಾಂಚಕಾರಿ ನಿಗೂಢ ರಹಸ್ಯ ಕಥೆ

ಬಿ. ಆರ್. ಫಿಲ್ಮ್ಸ್‌ರವರ

ಇತೆ ಫೂಕ್

(ವರ್ಣದಲ್ಲಿ)

ಪಾತ್ರ : ನಂದಾ ಮತ್ತು ರಾಜೇಶ್ ಖನ್ನಾ ನಿರ್ದೇಶನ : ಯಶ್ ಜೋಪ್ರಾ

ವಿ. ಸೂ. ಚಿತ್ರಪ್ರದರ್ಶನ ಆರಂಭವಾಗುವುದಕ್ಕೆ ಮುಂಚೆ ಪ್ರೇಕ್ಷಕರು ತಮ್ಮ ತಮ್ಮ ಆಸನಗಳನ್ನು ಕಾದಿರಿಸಿಕೊಳ್ಳಬೇಕಾಗಿ ವಿನಂತಿ. ಪ್ರದರ್ಶನದ ಆರಂಭದ ನಂತರ ಟಿಕೆಟ್ ಮಾರಾಟವನ್ನು ನಿಲ್ಲಿಸಲಾಗುವುದು.

ದಸರಾ ವಸ್ತುಪ್ರದರ್ಶನದಲ್ಲಿ

ವಿಶೇಷ ಮನರಂಜನೆ ಕಾರ್ಯಕ್ರಮ

ತಾ|| 5-11-1969 ಬುಧವಾರ

ಸಂಜೆ 7 ಘಂಟೆಗೆ

ಬೆಂಗಳೂರಿನ ಶ್ರೀಮತಿ ಶ್ಯಾಮಲಾಜಿ ಭಾವೆ ಅವರಿಂದ

ಸಂಗೀತ

ಪ್ರವೇಶ ದರ 50. ಪೈಸೆ.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

2,50,000 ರೂ. ಗಳ 4 ಮೊದಲನೆ ಬಹುಮಾನಗಳು

1,00,000 ರೂ. ಗಳ 4 ಎರಡನೆ ಬಹುಮಾನಗಳು

ಇವುಗಳಲ್ಲದೆ ಜೊತೆಗೆ 4,268 ಇತರ 100 ರೂ. ಇಂದ 50,000 ರೂ. ವರೆಗಿನ ನಗದು ಬಹುಮಾನಗಳು

ಒಂದು ಟಿಕೆಟ್ಟಿನ ಬೆಲೆ 1-00 ರೂ. ಮಾತ್ರ

ಲಾಟರಿ "ಡ್ರಾ" ಮಾಡುವ ತಾರೀಖು, 25 ನೇ ಜನವರಿ 1970, ಭಾನುವಾರ

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

* ನವದೆಹಲಿ— ಶ್ರೀ ಗಿರಿಯವರ ವಿರುದ್ಧ ಜನಾವಣಾಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟು ಡಿಸೆಂಬರ್ 1 ಕ್ಕೆ ನಿಸ್ಕರ್ಷಿಸಿದೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿದ ಕೇಂದ್ರ ರೈಲ್ವೆಯ ಮಂತ್ರಿ ಶ್ರೀ ರಾಮಸುಭಾಗ ಸಿಂಗರು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಸೂಚನೆ ಮೇರೆ ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು.

○

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಕಾಂಗ್ರೆಸಿನಿಂದ ತೆಗೆಯಲಾಗುವದೆಂಬ ವರದಿ ಇದೆ.

★

ಮಲ್ಲೀನಾಥಪುರಕ್ಕೆ ಶ್ರೀ ಚನ್ನಬಸಪ್ಪನವರನ್ನು ನೋಡಲು ಹೋಗುತ್ತಿದ್ದ ಶ್ರೀ ಕೆ. ಹನುಮಂತಯ್ಯನವರ ಕಾರು ಅಪಘಾತಕ್ಕೆ ಈಡಾಗಿ ಅವರ ಕೈಮೂಳೆ ಮುರಿದು ಕೆ. ಆರ್. ಆಸ್ಪತ್ರೆಗೆ ದಾಖಲಾದರು.

ಮೋಸಗಾರ ಡಾಕ್ಟರು ಮದುವೆಗೆಂಡು

ಕೋಲಾರ—ಆಕ್ಟೋಬರು 30 ರಂದು ನಡೆಸಲು ನಿಶ್ಚಯಿಸಲಾಗಿದ್ದ ಒಂದು ಮದುವೆ ವರನಾದ ಒಬ್ಬ ಡಾಕ್ಟರು ಅದಕ್ಕೆ 30 ಗಂಟೆ ಮುಂಚೆ ನಾಪತ್ತೆಯಾದನು ; ಇವನು ವಧುವಿನ ಮನೆಯವರಿಂದ ವರದಕ್ಷಿಣೆಯಾಗಿ ರೂ 11000 ವಸೂಲ್ಮಾಡಿಕೊಂಡಿದಾನೆ – ಪೋಲೀಸರಲ್ಲಿ ದೂರು ಕೊಡಲಾಗಿದೆ.

★

ಮುಖ್ಯ ಮಂತ್ರಿಗಳ ಪ್ರಯತ್ನ ವಿಫಲ

ನವದೆಹಲಿ— ಸಂಸ್ಥೆಯಲ್ಲಿ ಐಕ್ಯತೆ ಸಾಧಿಸಲು ಕಾಂಗ್ರೆಸ್ ಮುಖ್ಯ ಮಂತ್ರಿಗಳು ಮಾಡಿದ ಪ್ರಯತ್ನ ನಿಫಲಗೊಂಡಿರುವದೆಂದು ರಾಜಸ್ಥಾನ ಮುಖ್ಯಮಂತ್ರಿ ಸುಖಾಡಿಯವ ಹೇಳಿದರು –ಪ್ರಧಾನಿಯವರಿ ನಿಜಲಿಂಗಪ್ಪನವರು ಬರೆದ ಉದ್ರೇಕಕೊಳಿಸುವ ಕಾಗದದಿಂದ ವಾತಾವರಣ ಕೆಟ್ಟು ಮುಖ್ಯ ಮಂತ್ರಿಗಳು ಮುಂದುವರಿಸಲು ತೊಂದರೆಯಾಗಿದೆಯೆಂದು ಹೇಳಿದರು.

ಡೆಲ್ಲಿಗೆ ಮುಖ್ಯಮಂತ್ರಿಗಳು

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಬುಧವಾರ ನವದೆಹಲಿಗೆ ಪ್ರಯಾಣ ಮಾಡುವರು – ಪ್ರಾಯಶಃ ಕಾಂಗ್ರೆಸ್ಸಿನಲ್ಲಿ ಕಾಂ ಐಕ್ಯತೆ ಸಾಧಿಸಬಹುದು.

★

ಅವಕಾಶವಿದೆ

ನವದೆಹಲಿ— ತಮಗೆ ಪ್ರಧಾನಿಗಳು ಬರೆದ ಕಾಗದದ ಬಗ್ಗೆ ಸಮಾಲೋಚಿಸಿ ಶೀಘ್ರ ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಐಕ್ಯತೆಗೆ ನಿಜವಾಗಿ ಇಚ್ಛೆಯಿದ್ದರೆ ,ನಡೆಯಲು ಸಾಧ್ಯವೆಂದು ಹೇಳಿದರು.

●

ಪೌರಸಭೆಯವರ ತಿರಸ್ಕಾರ

ಶಿವಮೊಗ್ಗಾ— ನೀರಿನ ಕಂದಾಯ ಹೆಚ್ಚಿಸಿ, ತಿಂಗಳಿಗೆ ರೂ 2-50 ಇಡಲು ಸರ್ಕಾರ ತಿಳಿಸಿದುದನ್ನು ಪೌರಸಭೆಯು ತಿರಸ್ಕರಿಸಿದೆ.

★

ಮೋಟಾರು ಸೈಕಲ್ ಸುಟ್ಟರು-

ಬೆಂಗಳೂರು— ಹೊಸ ತರಗುಪೇಟೆಯಲ್ಲಿ ಒಬ್ಬ ಲಾರಿ ಡ್ರೈವರಿಗೆ ಒಬ್ಬ ಪೋಲೀಸು ಅಧಿಕಾರಿ ಕೆನ್ನೆಗೆ ಹೊಡೆದದ್ದಕ್ಕಾಗಿ ಕುಪಿತ ಗುಂಪು ಅವರ ಮೋಟಾರು ಸೈಕಲ್ ಸುಟ್ಟಿತು.

○

ಲಕ್ಷ ಜನರ ಮುಷ್ಕರ

ಷಿಲಾಂಗ್— ತಮ್ಮ ಕೇಳಿಕೆಯ ಒತ್ತಾಯಕ್ಕಾಗಿ ಒಂದು ಲಕ್ಷ ನೌಕರರು ಅಸಾಂ ಅದ್ಯಂತ 11 ಗಂಟೆ ಸಾಂಕೇತಿಕ ಮುಷ್ಕರ ನಡೆಸಿದರು.

●

ವ್ಯಾಗ್ ಲೂಟಿ

ಮೊರಾರಾಬಾದು— ಮಿಲಿಟರಿ ದಾಸ್ತಾನಿನ್ದ ಎರಡು ರೈಲ್ವೇ ವ್ಯಾಗ್‌ಗಳನ್ನು ಆಯುಧಪಾಣಿ ಡಕಾಯಿತರು ಲೂಟಿ ಮಾಡಿದರು.

(2)

ಕುಟುಂಬ ಯೋಜನೆಗೆ ಹೋಮಿಯೋಪಥಿ ವೈದ್ಯರ ನೆರವು

ಜನಕೋಟಿಯ ನೆರಳಿಕೆಯನ್ನು ಹೋಗಲಾಡಿಸುವ ಸಚ್ಚದಾಯಕವಾದ ವೈದ್ಯ ಪದ್ಧತಿಗೆ ಬೆಂಬಲ, ಪ್ರೋತ್ಸಾಹ ಅತ್ಯಗತ್ಯ. ಹೋಮಿಯೋಪಥಿ ವೈದ್ಯಶಾಸ್ತ್ರ ಈ ರಾಕ್ಷಯಲ್ಲಿ ಯಶಸ್ವಿಯಾಗಿದೆಯೆಂದು ಕೇಂದ್ರ ಆರೋಗ್ಯ ಸಚಿವೆ ಶ್ರೀ ಕೆ. ಕೆ. ಷಾ ಅಖಿಲ ಭಾರತ ಹೋಮಿಯೋಪಥಿ ಸಂಸ್ಥೆಯ ರಜತ ಮಹೋತ್ಸವ ಹಾಗೂ ಅಖಿಲ ಭಾರತ ಹೋಮಿಯೋಪಥಿ ಕಾಂಗ್ರೆಸ್‌ನ ಎಂಟನೇ ಅಧಿವೇಶನವನ್ನು ಕಲ್ಕತ್ತಾದಲ್ಲಿ ಸೋಸ್ಥಿ ಉಚ್ಚಾರಿಸುತ್ತಾ ಹೇಳಿದರು.

ಸಂಸತ್ತಿನಲ್ಲಿ ಶಾಸನದ ಮೂಲಕ ಕೇಂದ್ರ ಹೋಮಿಯೋಪಥಿ ವೈದ್ಯ ಪರಿಷತ್ತನ್ನು ಸ್ಥಾಪಿಸಲಾಗುತ್ತಿದೆಯೆಂದು ನುಡಿದರು. ವೈದ್ಯರ ಅಭಾವವಿರುವ ಗ್ರಾಮಾಂತರ ಪ್ರದೇಶಗಳಲ್ಲಿ ರಾಜ್ಯ ಸರ್ಕಾರಗಳು ಹೋಮಿಯೋಪಥಿ ವೈದ್ಯಶಾಲೆ ಸ್ಥಾಪಿಸಬೇಕೆಂದೂ, ಹೋಮಿಯೋಪಥಿ ವೈದ್ಯರಿಗೆ ಧನಸಹಾಯವೊದಗಿಸಬೇಕೆಂದೂ ಸಚಿವರು ಮನವಿ ಮಾಡಿಕೊಂಡರು.

ಭ್ರಷ್ಟಾಚಾರದ ವಿರುದ್ಧ

ಸೊಲಾನ್ ವಿದ್ಯುತ್ ಯೋಜನೆಯ ಅಸಿಸ್ಟೆಂಟ್ ಇಂಜನಿಯರೊಬ್ಬರು ಫೋಟೊಮೆಟ್ರಿಕ್ ಸರ್ಟಿಫಿಕೇಟ್ ಮೂಲಕ ಉದ್ಯೋಗ ಪಡೆದುದಕ್ಕಾಗಿ ಅವರ ವಿರುದ್ಧ ಕೇಂದ್ರ ತನಿಖಾ ಶಾಖೆ ಮೊಕದ್ದಮೆ ಹೂಡಿರುವುದಾಗಿ ನವದೆಹಲಿ ವಾರ್ತೆ ತಿಳಿಸುತ್ತದೆ. ಕೇಂದ್ರ ಸ್ಥಾನೋದ್ಯಮ ಶಾಖೆಯ ಜಂಟಿ ಕಾರ್ಯದರ್ಶಿಯು ಅಪ್ರಸಹಾಯಕರೊಬ್ಬರು ಸಂಬಳಕ್ಕೆ ದ್ರೋಹ ಮಾಡಿ ವಿಮಾನವೊಂದರ ಬಗ್ಗೆ ಶಾಖೆ ಮಾಡಿದ್ದ ಗುಪ್ತ ಶಿಫಾರಸ್ಸನ್ನು ಖಾಸಗಿ ವ್ಯಕ್ತಿಗೆ ನೀಡಿದುದಕ್ಕಾಗಿ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲ್ಪಟ್ಟಿದೆ. ಈ ವರ್ಷ ಸೆಪ್ಟೆಂಬರ್ ಮಾಸದಲ್ಲಿ ಕೇಂದ್ರ ತನಿಖಾ ಶಾಖೆಯು ಬಹಿರಂಗ ತನಿಖೆಗೆ 214 ಅಪಾದನೆಗಳನ್ನು ತೆಗೆದುಕೊಂಡಿತು. ಇದರಲ್ಲಿ 76 ಗೆಜಿಟೆಡ್ ಅಧಿಕಾರಿಗಳಿದ್ದರು. ಈ ಮಾಸದಲ್ಲಿ 13 ಉದ್ಯೋಗಿಗಳಿಗೆ ಶಿಕ್ಷೆ ವಿಧಿಸಲಾಯಿತು. ಬೆಂಗಳೂರು ಎಂ. ಇ. ಎಸ್‌ನಲ್ಲಿರುವ ಗ್ಯಾರಿಸನ್ ಇಂಜಿನಿಯರ್ ಶ್ರೀ ಎಲ್ ಎಚ್ ಬಾದಾಮಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ವಿಧಿಸಲಾಯಿತು.

ದೇಶದ ಹಿತಕಾಗಿ
ಕುಟುಂಬ ಯೋಜನೆ

SHAKTI
SUDHA
A Superb Tonic

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ವುಡ್‌ಲ್ಯಾಂಡ್ ಜಯಪ್ರದ 4 ನೇ ವಾರ
ಶಿ . ನ ಆನೋಖೆ ಪ್ರಾಣಂಖ
— ಮನನೋಹಕ ಹಿಂದಿ ಚಿತ್ರ — ಈಸ್ಟ್‌ಮ್ಯಾನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶಿಕಪೂರ್ ಬಬೀತಾ ಜಾನಿವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ 3 ಪ್ರದರ್ಶನಗಳು]

ಆಪೆರಾ ಆನೋಖೆ 2 ನೇ ವಾರ
.... ಅತ್ಯಾನೋಖೆ ತಮಿಳು ಚಿತ್ರ ....
ತುಣ್ಣೈವನ್
ಪಾತ್ರ— ಎ.ವಿ.ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್
ನಿರ್ದೇಶನ : ಎಂ ಎಂ ತಿರುಮಂಗಂ
ದಿನ 3 ಆಟಗಳು

Help The Gorakshana



ಗೋರಕ್ಷಣೆಯೆಂಬ ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ಕೊಡಿ
Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata Mr S Krishna Rao (Proprietor) at the Saivavadi Press Chamarajapuram, Mysore